ಶ್ರೀ ಆರ್. ಎಲ್. ಜಾಲಪ್ಪ —ಮಾನ್ಯ ಅಧ್ಯಕ್ಷರೇ, ಪುತ್ತೂರು ಉಪ ಮಾರುಕಟ್ಟೆ ಕಟ್ಟಡದ ಕೆಲಸ ಮುಗಿದ ಮೇಲೆ ವ್ಯಾಪಾರವನ್ನು ಅಲ್ಲಿಯೇ ಪ್ರಾಡತಕ್ಕದ್ದು ನ್ಯಾಯವಾಗಿದೆ. ಈಗ ಇರತಕ್ಕಂಥ ರಸ್ತೆಯು ಸದಸ್ಯರು ಹೇಳಿರುವ ಹಾಗೆ ದೂರವಾಗಿರುವುದು ನಿಜ. ಇದಕ್ಕಿಂತ ಹತ್ತಿರವಾದ ಮಾರ್ಗ ನಿರ್ಮಾಣದ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡಿದ್ದು, ಭೂ ಸ್ವಾಧೀನ ಪ್ರಕರಣ ನಡೆಯುತ್ತಿದೆ. ಕೆಲವು ಭೂ ಮಾಲೀಕರು ಜಮೀನನ್ನು ಬಿಟ್ಟುಕೊಡಲು ಒಪ್ಪಿಲ್ಲವಾದ್ದರಿಂದ ಈ ಸಮೀಪದ ರಸ್ತೆಯು ಕೆಲಸ ನಿಂತಿದೆ. ಇವರ ಮನವೊಲಿಸಿ ಈ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡು ಸಮೀಪ ಮಾರ್ಗದ ವ್ಯವಸ್ಥೆ ಮಾಡಲು ಕ್ರಮ ತೆಗದುಕೊಳ್ಳುತ್ತೇವೆ. ಅಲ್ಲಿಯವರೆಗೆ ಸ್ವಲ್ಪ ತೊಂದರೆಯಾದರೂ ಯಾವ ಉದ್ದೇಶಕ್ಕಾಗಿ ಉಪ ಮಾರುಕಟ್ಟೆಯನ್ನು ಕಟ್ಟಲಾಗಿ ದೆಯೋ, ಆ ಉದ್ದೇಶ ಸಫಲವಾಗಬೇಕಾದರೆ ಉದ್ಘಾಟನೆಯಾದ ಉಪ ಮಾರುಕಟ್ಟೆಯನ್ನೇ ಉಪಯೋಗಿಸಬೇಕು. ಈ ತೊಂದರೆಯು ಕೇವಲ ತಾತ್ಕಾಲಿಕ.

4. Non Collection of levy Paddy in Kodagu Dist

SRI. D. A. CHINNAPPA.—The Hon'ble Speaker, in Kodagu District Government has not started collecting levy paddy till to day, even though the harvest is almost over. The Tahsildar and Food Assistant have called for a meeting of the mill owners on 23-1-1986 at the chambers of the Tahsildar, Madikeri. In the meeting the concerned officials have directed the mill owners to buy paddy at Mandya, Mysore or Shimoga and put levy paddy there and show receipt for having delivered the levy rice at the collecting point of the district stated above. The places shown are far away from Kodagu District and it is an impossible task for the rice mill owners. Why this kind of order issued by the officials ? I urge the Government to issue orders for collecting levy rice at Kodagu District only at the points of collection of levy rice.

ಶ್ರೀ ಡಿ. ಮಂಜುನಾಥ್. —ಸಂಬಂಧಪಟ್ಟ ಮಂತ್ರಿಗಳಿಗೆ ಈ ವಿಷಯವನ್ನು ಹೇಳಿ ಮಾನ್ಯ ಸದಸ್ಯರಿಗೆ ಉತ್ತರವನ್ನು ತರಿಸಿಕೊಡುತ್ತೇನೆ.

ಕಾವಲ್ ಬೈರ ಸಂದ್ರದಲ್ಲಿ ವಾಸವಾಗಿರುವ ಸರಕಾರಿ ನಾಕರರ ಮೇಲೆ ಹಲ್ಲೆ ಮಾಡಿದವರ ಮೇಲೆ ಕ್ರಮ ತೆಗೆದು ಕೊಳ್ಳುವ ಬಗ್ಗೆ

ಶ್ರೀ ಪ್ರತಾಪಚಂದ್ರ ಶೆಟ್ಟಿ —ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿ ಇಲ್ಲದೇ ಇರುವುದರಿಂದ, ಈಗ ನಾನು ಓದುವುದಕ್ಕೆ ಇಚ್ಚಿಸುವುದಿಲ್ಲವೆಂದು ಹೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಶೆಟ್ಟಿಯವರೇ, ನಿಮಗೆ ಖಂಡಿತ ಉತ್ತರ ತರಿಸಿಕೊಡುತ್ತೇನೆ.

ಶ್ರೀ ಪ್ರತಾಪಚಂದ್ರ ಶೆಟ್ಟಿ.— ಪ್ರತಿ ವರ್ಷವೂ, ನಾನು ಹೀಗೆ ಓದುತ್ತಲೇ ಇದ್ದೇವೆ ಆದರೆ ಮಂತ್ರಿಗಳಿಂದ ಮಾತ್ರ ಉತ್ತರ ಬರುವುದಿಲ್ಲ. ಆದ್ದರಿಂದ ಇದನ್ನು ಸದನದಲ್ಲಿ ಓದುವುದಕ್ಕೆ ನಾನು ಇಚ್ಚೆ ಪಡುವುದಿಲ್ಲ.

ಅಧ್ಯಕ್ಷರು.—ಮಾನ್ಯ ಶೆಟ್ಟಿಯವರೇ, ಓದಿ ಹೇಳಿ. ನೀವು ನಿರಾಶಾವಾದಿಗಳಾಗಬಾರದು

ಶ್ರೀ ಪ್ರತಾಪಚಂದ್ರ ಶೆಟ್ಟಿ.—ಮಾನ್ಯ ಅಧ್ಯಕ್ಷರೇ, ತಮ್ಮ ಕೇಳಿಕೆ ಪ್ರಕಾರ ಮತ್ತು ನಿಮಗೆ ಗೌರವ ಕೊಟ್ಟು ಈ ಸಂದರ್ಭದಲ್ಲಿ ನಾನು ಓದುತ್ತೇನೆ.

ಬೆಂಗಳೂರು ನಗರದ ದೇವರ ಜೀವನಹಳ್ಳಿ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಬರುವ ಕಾವಲ್ ಬೈರಸಂದ್ರದಲ್ಲಿ ಪಾಪಯ್ಯ ಕಾಂಪೌಂಡಿನಲ್ಲಿ ವಾಸಮಾಡುತ್ತಿರುವ ಹಾಗೂ ಪಿ. ಅಂಡ್ ಟಿ. ಯಲ್ಲಿ ಕೆಲಸ

ಮಾಡುತ್ತಿರುವ ಶ್ರೀ ಐ. ಶ್ರೀನಿವಾಸ್ ಇವರನ್ನು ಕೇವಲ ರೇಶನ್ ಕಾರ್ಡಿಗೆ ಮನೆಯಂ ಮಾಲೀಕರ ಒಂದು ಸರ್ಟಿಫಿಕೇಟ್ ಕೇಳಿದ್ದಕ್ಕೆ ಮನೆ ಮಾಲೀಕರಾದ ಶ್ರೀ ಪಾಪಯ್ಯ ಮತ್ತು ಅವರ ಮಕ್ಕಳು ತಾರೀಖು ೨೪-೧-೬೬ ರಂದು ಸಿಕ್ಕಾಪಟ್ಟೆ ಥಳಿಸಿ ಹೊಡೆದು ಮನೆಯೊಳಗೆ ಇವರನ್ನು ಕೂಡಿ ಹಾಕಿ ಚಿಲಕ ಹಾಕಿ ಗೋಳಾಡಿಸಿದ ಬಗ್ಗೆ ದೇವರಜೀವನಹಳ್ಳಿ ಪೋಲೀಸ್ ಠಾಣೆಗೆ ದೂರು ಕೊಟ್ಟರೂ ಸಂಬಂಧಪಟ್ಟ ತಪ್ಪಿತಸ್ಥರ ಮೇಲೆ ಉಗ್ರ ಕ್ರಮ ಕೈಗೊಳ್ಳದಿರುವುದರಿಂದ ಇವರು ಪೋಲೀಸ್ ಡಿ. ಐ. ಜಿ. ಯವರಿಗೆ ಮತ್ತು ಸರ್ಕಲ್ ಇನ್ಸ್‌ಪೆಕ್ಟರ್, ಫ್ರೇಜರ್‌ಟೌನ್ ಇವರಿಗೆ ದೂರು ಕೊಟ್ಟರು. ಅವರ ನಿರ್ದೇಶನದ ಮೇಲೆ ತಪ್ಪಿತಸ್ಥರನ್ನು ಬಂಧಿಸಲು ಹೋದಾಗ ತಪ್ಪಿತಸ್ಥರೆಲ್ಲರೂ ಪರಾರಿಯಾಗಿದ್ದಾರೆ. ಈ ಬಗ್ಗೆ ಸರ್ಕಾರದವರು ತಪ್ಪಿತಸ್ಥರಾದ ಶ್ರೀ ಪಾಪಯ್ಯ ಮತ್ತು ಅವರ ಮಕ್ಕಳ ಮೇಲೆ ಉಗ್ರ ಕ್ರಮ ತೆಗೆದುಕೊಂಡು ಬಡ ನೌಕರನಾದ ಶ್ರೀ ಶ್ರೀನಿವಾಸ್ ಮತ್ತು ಅವರ ಕುಟುಂಬದವರಿಗೆ ರಕ್ಷಣೆ ಕೊಡ ಬೇಕೆಂದು ಮತ್ತು ಅವರ ಪ್ರಾಣಕ್ಕೆ ಭಯವಿರುವುದರಿಂದ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳ ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ್.—ಗೃಹ ಮಂತ್ರಿಯವರಿಗೆ ಈ ವಿಷಯವನ್ನು ತಿಳಿಸಿ ಉತ್ತರವನ್ನು ತರಿಸಿಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

೧೨-೩೦ ಪಿ.ಎಂ.

6. ಕಾರವಾರದ ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯದಲ್ಲಿ ಅನಧಿಕೃತವಾಗಿ ಇರುವ ವಿದ್ಯಾರ್ಥಿಗಳ ಮೇಲೆ ಕ್ರಮ ಹಾಗೂ ವಿದ್ಯಾರ್ಥಿ ನಿಲಯವನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸುವ ಬಗ್ಗೆ

ಶ್ರೀಮತಿ ಸುಮಾವಸಂತ್ (ವೀರರಾಜಪೇಟೆ) — ಮಾನ್ಯ ಅಧ್ಯಕ್ಷರೆ, ಕಾರವಾರದ ಹಿಂದುಳಿದ ಜಾತಿ ಮತ್ತು ಜನಾಂಗದ ವಿದ್ಯಾರ್ಥಿ ನಿಲಯದಲ್ಲಿ ಸುಮಾರು ೧೧೦ ಮಂದಿಗೆ ಮಾತ್ರ ಆಶ್ರಯವಿದ್ದು, ವಿದ್ಯಾರ್ಥಿಗಳಿಲ್ಲದ ಸುಮಾರು ೨೦ ಮಂದಿ ವಿದ್ಯಾರ್ಥಿಗಳಿಗೆ ಮಾಡಿರುವ ಊಟವನ್ನು ಉಪಯೋಗಿಸಿ ಕೊಳ್ಳಲಾಗುತ್ತಿದ್ದು ಈ ಬಗ್ಗೆ ವಿದ್ಯಾರ್ಥಿ ನಿಲಯದ ಮೇಲ್ವಿಚಾರಕರಿಗೆ ದೂರು ನೀಡಿದ್ದಾಗ್ಯೂ ಯಾವ ಕ್ರಮವನ್ನೂ ಕೈಕೊಂಡಿರುವುದಿಲ್ಲ. ಅಲ್ಲದೆ ವಿದ್ಯಾರ್ಥಿಗಳಿಗೆ ಈಗ ನೀಡುತ್ತಿರುವ ಊಟ ಯೋಗ್ಯವಲ್ಲದ ರೀತಿಯಲ್ಲಿದ್ದು ಕಲ್ಲು, ಭತ್ತ, ಹುಳುಗಳು ಇದ್ದು ಅಡಿಗೆ ಮನೆಯು ಸ್ವಚ್ಛವಾಗಿರುವುದಿಲ್ಲ. ಮತ್ತು ಅಡಿಗೆ ಮನೆಯೂ ಕೂಡಾ ಕುಸಿಯುವ ಸ್ಥಿತಿಯಲ್ಲಿದೆ. ವಿದ್ಯಾರ್ಥಿಗಳು ಈ ನಿಲಯವನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸಬೇಕೆಂದು ಸಂಬಂಧಪಟ್ಟವರಿಗೆ ಆಗ್ರಹ ಪಡಿಸಿರುವುದಾಗಿ ತಿಳಿದು ಬಂದಿದೆ. ಈ ವಿದ್ಯಾರ್ಥಿ ನಿಲಯದ ಸ್ಥಿತಿಯನ್ನು ಪರಿಗಣಿಸಿದಲ್ಲಿ ರಾಜ್ಯದಲ್ಲಿನ ಹಿಂದುಳಿದ ಜಾತಿ ಮತ್ತು ಜನಾಂಗದ ವಿದ್ಯಾರ್ಥಿ ನಿಲಯಗಳೆಲ್ಲವೂ ಇದೇ ಪರಿಸ್ಥಿತಿಯಲ್ಲಿರಬಹುದೆಂದು ಊಹಿಸ ಬಹುದಾಗಿದೆ. ಆದ್ದರಿಂದ ಸಂಬಂಧಪಟ್ಟ ಮಂತ್ರಿಗಳು ಈ ಬಗ್ಗೆ ಸದನಕ್ಕೆ ಹೇಳಿಕೆ ನೀಡುವುದಲ್ಲದೆ ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಲು ವಿಧಾನ ಮಂಡಲದ ಹಿಂದುಳಿದ ಜಾತಿ ಮತ್ತು ವರ್ಗಗಳ ಕಲ್ಯಾಣ ಸಮಿತಿಗೆ ಒಪ್ಪಿಸಬೇಕೆಂದು ಮಾನ್ಯ ವಿಧಾನ ಸಭಾಧ್ಯಕ್ಷರನ್ನು ಕೋರುತ್ತೇವೆ.

ಶ್ರೀ ವಿ. ಎಲ್. ಪಾಟೀಲ್.— ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯೆಯರು ಹೇಳಿದ ಹಾಗೆ ವಿದ್ಯಾರ್ಥಿ ನಿಲಯವು ಸರಿಯಾದ ವ್ಯವಸ್ಥೆ ಇಲ್ಲದೆ ಬಾಡಿಗೆ ಕಟ್ಟಡದಲ್ಲಿ ಇದೆ. ಈಗ ಸರಕಾರ ೧೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಹೊಸ ಕಟ್ಟಡವನ್ನು ಕಟ್ಟಿಸಿದೆ. ಆ ಕಟ್ಟಡಕ್ಕೆ ನೀರು ಮತ್ತಿತರ ಅಗತ್ಯ ವ್ಯವಸ್ಥೆಗಳನ್ನು ಮಾಡಿ. ಬೇಗನೆ ಸ್ಥಳಾಂತರ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ಅಲ್ಲಿ ನೀರಿಲ್ಲ, ವಿದ್ಯುಚ್ಛಕ್ತಿ ಇಲ್ಲದಿದ್ದುದರಿಂದ, ಆ ವ್ಯವಸ್ಥೆಯನ್ನು ಮಾಡಿದ್ದೇವೆ. ಹಾಗೆಯೇ ಕೆಲವು ದೂರುಗಳನ್ನು ಮಾನ್ಯ ಸದಸ್ಯೆಯರು ಹೇಳಿದ್ದಾರೆ. ಅಂತಹ ದೂರುಗಳ ಪಟ್ಟಿಯನ್ನು ಮಾಡುತ್ತಾ ಇದ್ದೇವೆ. ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.